136

ಸಂ:ಆರ್ ಆರ್ ಟಿ(ಭೂಮಿ)31/04-05.

ಜಿಲ್ಲಾಧಿಕಾರಿಯವರ ಕಾರ್ಯಾಲಯ
ಹಾಸನ ಜಿಲ್ಲೆ,
ಹಾಸನ , ದಿನಾಂಕ:04/06/2004.

# : : ಸುತ್ತೋಲೆ : :

**ವಿಷಯ:-** ದಿನಾಂಕ:01/06/2004ರಿಂದ ಹಾಸನ ಜಿಲ್ಲೆಯಲ್ಲಿ ಗಣಕೀಕೃತ ಪಹಣಿಯ ಮೇಲೆ **ಹಾಲೋಗ್ರಾಮ್** ಅನ್ನು ಬಳಸುವ ಬಗ್ಗೆ.

**ಉಲ್ಲೇಖ:-**ಸರ್ಕಾರಿ ಸುತ್ತೋಲೆ ಸಂ:ಆರ್ ಡಿ 40 ಎಂ ಆರ್ ಆರ್ 2002, ದಿನಾಂಕ: 03/03/2004.

###

ಭೂಮಿ ಯೋಜನೆಯಲ್ಲಿ ಕರ್ನಾಟಕದ ರೈತರ ಎಲ್ಲಾ ಭೂದಾಖಲೆಗಳನ್ನು ಸರ್ಕಾರವು ಗಣಕೀಕೃತ ಗೊಳಿಸಿದೆ. ತಾಲ್ಲೂಕು ಕಛೇರಿಗಳಲ್ಲಿ ಸರ್ಕಾರವು ಸ್ಥಾಪಿಸಿರುವ ಕಿಯೋಸ್ಕ್ ಗಳಿಂದ ರೈತರಿಗೆ ಭೂದಾಖಲೆ ಗಳನ್ನು ಆನ್ ಲೈನ್ ಬಿಡುಗಡೆ ಮಾಡಲು ಈ ಯೋಜನೆ ಅನುಕೂಲ ಮಾಡಿದೆ. ಅಲ್ಲದೇ ಸಾರ್ವಜನಿಕ -ಖಾಸಗಿ ಸಹಭಾಗಿತ್ವದೊಂದಿಗೆ ಗ್ರಾಮ ಮಟ್ಟಕ್ಕೆ ಈ ಯೋಜನೆಯನ್ನು ವಿಕೇಂದ್ರೀಕರಿಸಲಾಗಿದೆ. ಈ ದಾಖಲೆಗಳು ಕಾನೂನುಬದ್ಧ ದಾಖಲೆಗಳಾಗಿರುವುದರಿಂದ ಸಾಕಷ್ಟು ರಕ್ಷಣಾ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿರುತ್ತದೆ. ಆದ್ದರಿಂದ ತಾಲ್ಲೂಕು ಕಛೇರಿ ಹಾಗೂ ಗ್ರಾಮ ಮಟ್ಟದ ಪಿ.ಪಿ.ಪಿ. ಕಿಯೋಸ್ಕ್ ಗಳಿಂದ ನೀಡಲಾಗುವ ಗಣಕೀಕೃತ ಭೂದಾಖಲೆಗಳಿಗೆ **ಹಾಲೋಗ್ರಾಮ್** ಗಳನ್ನು ಅಂಟಿಸಲು ಸರ್ಕಾರವು ನಿರ್ಧರಿಸಿದೆ.

ಆದ್ದರಿಂದ ಹಾಸನ ಜಿಲ್ಲೆಯ ತಾಲ್ಲೂಕು ಕಛೇರಿ ಕಿಯೋಸ್ಕ್ ಗಳಿಂದಾಗಲೀ ಅಥವಾ ಖಾಸಗಿ ಕಿಯೋಸ್ಕ್ ಗಳಿಂದಾಗಲಿ **ಹಾಲೋಗ್ರಾಮ್** ಇಲ್ಲದೇ ನೀಡಲ್ಪಡುವ ಯಾವುದೇ ಗಣಕೀಕೃತ ಆರ್‌ಟಿಸಿ ಯನ್ನು ಅಂಗೀಕರಿಸದಿರುವಂತೆ ಎಲ್ಲಾ ಇಲಾಖೆಗಳು ಹಾಗೂ ನ್ಯಾಯಾಲಯಗಳನ್ನು ಕೋರಲಾಗಿದೆ.

**ಜಿಲ್ಲಾಧಿಕಾರಿಗಳು,**
**ಹಾಸನ ಜಿಲ್ಲೆ, ಹಾಸನ.**

**ಪ್ರತಿಯನ್ನು:-**

1. ಮಾನ್ಯ ವಿಶೇಷ ಕಾರ್ಯದರ್ಶಿಗಳು(ಭೂಮಿ) ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ , ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
2. ಲೀಡ್ ಬ್ಯಾಂಕ್ ಮ್ಯಾನೇಜರ್ , ಕೆನರಾ ಬ್ಯಾಂಕ್ , ಹಾಸನ ಇವರಿಗೆ ಎಲ್ಲಾ ಬ್ಯಾಂಕು ವ್ಯವಸ್ಥಾಪಕರಿಗೆ ಈ ಬಗ್ಗೆ ನಿರ್ದೇಶನ ನೀಡಲು ಕೋರಿದೆ.
3. ಮುಖ್ಯ ಕಾರ್ಯನಿರ್ವಾಹಕ ವ್ಯವಸ್ಥಾಪಕರು, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಹಾಸನ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಹಾಸನ ಇವರಿಗೆ ಕಳುಹಿಸುತ್ತಾ , ಈ ಸುತ್ತೋಲೆಯನ್ನು ಸುದ್ಧಿ ಮಾಧ್ಯಮದಲ್ಲಿ ಸುದ್ದಿಯಾಗಿ ಪ್ರಕಟಿಸುವ ಬಗ್ಗೆ ಕ್ರಮ ಕೈಗೊಳ್ಳಲು ಕಳುಹಿಸಿದೆ.
5. ಜಿಲ್ಲಾ ನೋಂದಣಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ ಹಾಗೂ ನಿಮ್ಮ ಅಧೀನದಲ್ಲಿ ಬರುವ ಎಲ್ಲಾ ಉಪನೋಂದಣಾಧಿಕಾರಿಗಳವರಿಗೆ ಈ ಬಗ್ಗೆ ಸೂಕ್ತ ನಿರ್ದೇಶನ ನೀಡುವುದು.
6. ಉಪವಿಭಾಗಾಧಿಕಾರಿಗಳು, ಹಾಸನ/ಸಕಲೇಶಪುರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಜಿಲ್ಲೆಯ ಎಲ್ಲಾ ತಹಸೀಲ್ದಾರ್ ರಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8. ಸುತ್ತೋಲೆ ಕಡತಕ್ಕೆ.